೯) ಬ್ರಹ್ಮಾವರದ ಬಳಿ ಬೈಕೌಡಿ ರಸ್ತೆಯ ಭದ್ರಗಿರಿಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಫ್ಯೂಸ್‌ಗೆ ಮುಚ್ಚಳವಿಲ್ಲದಿರುವುದು.

ಶ್ರೀ ಬಸವರಾಜ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದ ಬಳಿ ಬೈಕಾಡಿ ರಸ್ತೆಯ ಪಕ್ಕದಲ್ಲಿ ಭದ್ರಗಿರಿಯಲ್ಲಿ ಇರುವ ವಿದ್ಯುತ್ ಟ್ರಾನ್ಸ್ ಫಾರ್ಮರ್ ಮೃತ್ಯುವಿನ ಕೋರೆ ದಾಡೆಗಳಂತೆ ನಿಂತಿದೆ. ಕೇವಲ ಮೂರು ಅಡಿ ಎತ್ತರವಿರುವ ಫ್ಯೂಸ್ ಕಾರಿಯರ್ ಬೋರ್ಡಿನಲ್ಲಿ ಯಾವ ಫ್ಯೂಸ್‌ಗೂ ಮುಚ್ಚಳವಿಲ್ಲ. ಶಾರ್ಟ್ ಸರ್ಕ್ಯೂಟ್ ಆಗಿ ಇದರಿಂದ ಬೆಂಕಿ ಕಾಣಿಸಿಕೊಂಡು, ಹೊಗೆ ಉಗುಳಿದ ಸಂದರ್ಭಗಳಂ ಹಲವಾರು ನೂರಾರು ಶಾಲಾ ಮಕ್ಕಳು, ಮುಗ್ಧ ಹಳ್ಳಿಗರು ಈ ಟ್ರಾನ್ಸ್‌ಫಾರ್ಮರ್ ಬಳಿ ದಿನನಿತ್ಯ ಹಾದು ಹೋಗುತ್ತಾರೆ. ಅಪತ್ತಿನ ಅರಿವಿಲ್ಲದ ಕುತೂಹಲದಿಂದ ಮುಟ್ಟಿದರೆ, ಆಟ್ಟಕ್ಕೆಂದು ಕೋಲಿನಿಂದ ತಟ್ಟಿದರೆ ಪರಿಣಾಮ ಏನಾಗಬಹುದು? ಕರೆಂಟಿನ ಕಣ್ಣಾಮುಚ್ಚಾಲೆಯ ಈ ಕಾಲದಲ್ಲಿ ಕರೆಂಟಿಲ್ಲವೆಂದು ಎಲ್ಲಿಯಾದರೂ ಕೈತಾಗಿಸಿದರೆ ಕಾಲನ ಪಾಲಾಗುವ ದಾರುಣಾ ಪರಿಸ್ಥಿತಿ ಇದೆ. ಈ ಸಂಭಾವ್ಯ ತೊಂದರೆ ತಪ್ಪಿಸಿ, ವ್ಯವಸ್ಥೆ ಸರಿಪಡಿಸಿ ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಇದರ ಬಗ್ಗೆ ಸಂಬಂಧಪಟ್ಟ ಕಾರ್ಯನಿರ್ವಾಹಕರಿಗೆ ಸ್ಥಳ ಪರೀಕ್ಷೆ ಮಾಡಿ ವರದಿ ಕೊಡುವಂತೆ ತಿಳಿಸಲಾಗಿದೆ. ಇದರ ಬಗ್ಗೆ ಅವಶ್ಯಕವಿರುವ ಕ್ರಮ ತೆಗೆದುಕೊಳ್ಳಲಾಗುತ್ತದೆ.

೧೦) ಕುಂದಾಪುರ ಕ್ಷೇತ್ರದ ಕುಂದಾಪುರ ಕೋಡಿಯಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು ಮನವಿ

ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕುಂದಾಪುರ ಕ್ಷೇತ್ರದ ಕುಂದಾಪುರ ಕೋಡಿಯಲ್ಲಿ ಸಮುದ್ರದ ಕೊರೆತ ಪ್ರಾರಂಭವಾಗಿದೆ. ಈ ಬಗ್ಗೆ ಹಲವಾರು ಮನವಿಗಳನ್ನು ನೊಂದ ಸಾರ್ವಜನಿಕರು ಸಲ್ಲಿಸಿರುತ್ತಾರೆ. ಕುಂದಾಪುರ ಕೋಡಿ ರಸ್ತೆಯೂ ಸಮುದ್ರ ಕೊರೆತದಿಂದ ಕೊರೆದು ಹೋಗುವ ಸಾಧ್ಯತೆ ಇದೆ. ತೆಂಗಿನ ಮರಗಳು ರೈತರ ಕೈತ್ಕಗಳು ಎಲ್ಲಾ ನಾಶವಾಗುವುದರೊಂದಿಗೆ ರೈತರ ಮನೆಗಳಿಗೂ ಕೊರೆತದ ಭೀತಿ ಇದೆ. ಹಿಂದೆ ಹಾಕಿದ ಕಲ್ಲುಗಳು ಕುಸಿಯುತ್ತಾ ಇವೆ. ಈ ಸಮುದ್ರ ಕೊರೆತದಿಂದಾಗುವ ನಷ್ಟಗಳ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದ ಮೇಲೆ ಹಾಕದೆ ತಾತ್ಕಾಲಿಕ ತಡೆಯನ್ನು ನಿರ್ಮಿಸಿ, ಶಾಶ್ವತ ತಡೆಗೋಡೆ ಕಟ್ಟಿಸುವ ವ್ಯವಸ್ಥೆ ಆಗಬೇಕೆಂದು ಸರಕಾರವನ್ನು ನಾನಕಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಶ್ರೀಮತಿ ಮನೋರಮಾ ಮಧ್ವರಾಜ್ ಅವರಿಗೆ ಕೊಟ್ಟರುವ ಉತ್ತರವನ್ನು ಇದಕ್ಕೆ ಪೂರಕವಾಗಿ ಸೇರಿಸಿಕೊಳ್ಳಬಹುದು. ಮಾನ್ಯ ಸದಸ್ಯರು ಸೂಚಿಸಿರುವ ಕುಂದಾಪುರ ತಾಲ್ಲೂಕಿನ, ಕಸಬಾ ಹೋಬಳಿಯ ಕೋಡಿ ಪ್ರದೇಶದಲ್ಲಿ ಸಮುದ್ರ ಕೊರೆತ ಪ್ರಾರಂಭವಾಗುವ ಶಂಕೆ ಇರುವುದು ಸರಿಯಷ್ಟೆ. ಸ್ಥಳೀಯ ಅಧಿಕಾರಿಗಳ ವರದಿಯಂತೆ ಈ ಸಮುದ್ರ ತೀರದ ಪ್ರದೇಶದಲ್ಲಿ ಸಮುದ್ರ ಕೊರೆತದ ಭೀತಿ ಇರುವುದರಿಂದ ತಾತ್ಕಾಲಿಕ ರಕ್ಷಣಾ ಕಾವಲುಗಾರಿಗಳನ್ನು ರೂಪಿಸಲಾಗಿದ.

೨,೦೦ ಪಿ. ಎಂ.

ಇದಕ್ಕೆ ತಾತ್ಕಾಲಿಕವಾಗಿ ಸುಮಾರು ಎರಡು ಲಕ್ಷ ರೂಪಾಯಿಗಳ ಖರ್ಚು ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಆದರೆ ನೀರಾವರಿ ಇಲಾಖೆಯು ಸೂಚಿಸಿರುವ ತಾತ್ಕಾಲಿಕ ರಕ್ಷಣಾ ಕಾವಲುಗಾರಿಗಳು ಸಮರ್ಪಕವಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಷ್ಕೃತ ರಕ್ಷಣಾ ಕೆಲಸದ ನಕ್ಷೆ ಮತ್ತು ಅಂದಾಜನ್ನು ರೂಪಿಸಲು ನೀರಾವರಿ ಇಲಾಖೆಯ ಅಧಿಕಾರಿಗಳನ್ನು ವಿನಂತಿಸಿರುತ್ತಾರೆ. ಕುಂದಾಪುರದ ಕಸಬಾ ಕೋಡಿ ಪ್ರದೇಶದಲ್ಲಿ ಗಮನಿಸಿರುವ ಸಮುದ್ರ ಕೊರೆತವನ್ನು ತಡೆಗಟ್ಟಲು ನೀರಾವರಿ ಇಲಾಖೆ ಶಾಶ್ವತ ಯೋಜನೆಯನ್ನು ರೂಪಿಸಿದೆ. ಇದರ ಅಂದಾಜು ರೂಪಾಯಿ ೧೩.೭೦